ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು – 1

ಸಂಖ್ಯೆ: ಆರ್.ಟಿ.ಇ ಸೀಟ್ ಹಂಚಿಕೆ 01/2017–18 ದಿನಾಂಕ: 02.05.2017

**ವಿಶೇಷ ಗಮನಕ್ಕಾಗಿ**

## ಸುತ್ತೋಲೆ

ವಿಷಯ: 2017–18 ನೇ ಸಾಲಿಗೆ ಆರ್.ಟಿ.ಇ ಕಾಯ್ದೆಯಡಿಯಲ್ಲಿ ಸೀಟು ಹಂಚಿಕೆ ಮಾಡಿರುವ ಬಗ್ಗೆ

ಉಲ್ಲೇಖ: ಆರ್.ಟಿ.ಇ ಕಾಯ್ದೆಯಡಿ ಅನ್ ಲೈನ್ ತಂತ್ರಾಂಶದಲ್ಲಿ ಲಾಟರಿ ಮೂಲಕ ಮೊದಲ ಸುತ್ತಿನಲ್ಲಿ ಹಂಚಿಕೆಯಾದ ಸೀಟುಗಳ ಹಂಚಿಕೆ ಪ್ರಕ್ರಿಯೆ ದಿನಾಂಕ: 28.04.2017.

2017–18 ನೇ ಸಾಲಿಗೆ ಆರ್.ಟಿ.ಇ ಕಾಯ್ದೆಯಡಿಯಲ್ಲಿ ದಿನಾಂಕ: 28.04.2017 ರಂದು ಅನ್‌ಲೈನ್ ತಂತ್ರಾಂಶದಲ್ಲಿ ಲಾಟರಿ ಮೂಲಕ ಮೊದಲ ಸುತ್ತಿನ ಸೀಟು ಹಂಚಿಕೆ ಮಾಡಲಾಗಿದೆ. ಸೀಟು ಹಂಚಿಕೆಯಾದ ಪ್ರತೀ ಮಗುವಿನ ಪೋಷಕರ ಮೊಬೈಲ್ ಸಂಖ್ಯೆಗೆ ದಿನಾಂಕ:29.04.2017 ಹಾಗೂ 30.04.2017 ರಂದು ಪ್ರತಿದಿನ 04 ಬಾರಿ ಕನ್ನಡ ಹಾಗೂ ಆಂಗ್ಲ ಭಾಷೆಗಳಲ್ಲಿ ಎಸ್.ಎಂ.ಎಸ್ ಕಳುಹಿಸಲಾಗಿದೆ.

ಆದ್ದರಿಂದ ಆಯ್ಕೆಯಾದ ಮಗುವಿನ ಪೋಷಕರು ಇಲಾಖಾ ವೆಬ್‌ಸೈಟ್‌ಗೆ ಭೇಟಿ ನೀಡಿ, ಸೀಟು ಆಯ್ಕೆಯಾದ ಅರ್ಜಿಯ ಸಂಖ್ಯೆಯನ್ನು ನಮೂದಿಸಿ, ಸೀಟು ಹಂಚಿಕೆಯಾದ ಪ್ರತಿಯ ಪ್ರಿಂಟ್ ಪಡೆದುಕೊಂಡು, ಈಗಾಗಲೇ ಆರ್.ಟಿ.ಇ ಅರ್ಜಿಯೊಂದಿಗೆ ನೀಡಿದ ಆಧಾರ್ ಸಂಖ್ಯೆಯ ಆಧಾರದೊಂದಿಗೆ ಆಯ್ಕೆಯಾದ ಶಾಲೆಗೆ ಸಂಪರ್ಕಿಸಿ ಮಗುವನ್ನು ದಾಖಲೆ ಮಾಡಿಸುವುದು.

ಸೀಟು ಹಂಚಿಕೆಯಾಗುವ ಮೊದಲೇ ಪೋಷಕರು ಹಾಗೂ ಮಗುವಿನ ಎಲ್ಲಾ ದಾಖಲೆಗಳನ್ನು ಇಲಾಖೆಯ ಹಂತದಲ್ಲಿ ಸಂಪೂರ್ಣವಾಗಿ ಪರಿಶೀಲಿಸಿರುವುದರಿಂದ, ಯಾವುದೇ ಕಾರಣಕ್ಕೂ ಆಡಳಿತ ಮಂಡಳಿಯವರು ದಾಖಲೆಗಳನ್ನು ಮರುಪರಿಶೀಲನೆ ಮಾಡುವ ಅವಶ್ಯಕತೆ ಇರುವುದಿಲ್ಲ. ಪ್ರವೇಶದ ಸಂದರ್ಭದಲ್ಲಿ ಪೋಷಕರು ನೀಡುವ ಆಧಾರ್ ಸಂಖ್ಯೆಯನ್ನು ಪೋಷಕರು ಹಾಗೂ ಮಗುವನ್ನು ಗುರುತಿಸಲು ಮಾತ್ರ ಪರಿಗಣಿಸಲು ಈ ಮೂಲಕ ಸೂಚಿಸಿದೆ. ಈ ವಿಚಾರವನ್ನು ಉಪನಿರ್ದೇಶಕರು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು ತಮ್ಮ ವ್ಯಾಪ್ತಿಗೆ ಬರುವ ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳ ಗಮನಕ್ಕೆ ತರಲು ಹಾಗೂ ಸೂಕ್ತ ನಿರ್ದೇಶನವನ್ನು ನೀಡಲು ಸೂಚಿಸಿದೆ.

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

**ಇವರಿಗೆ**

1. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ.
3. ಕಛೇರಿ ಪ್ರತಿ.